**ದಿಃ 18-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ವಾದಿ ಪರ ವಕೀಲರವರಿಂದ:**

ನಾನು ಈ ದಾವೆಯಲ್ಲಿ ಅಪ್ರಾಪ್ತ ವಾದಿಯ ಪಾಲಕನ ಕರ್ತನಾಗಿರುತ್ತೇನೆ. ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರ ಸಲ್ಲಿಸಿರುತ್ತೇನೆ. ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳು ನಿಜ ಇವೆ. ನಂತರ ಓದಿ, ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾನು ಈ ಕೆಳಗಿನ ದಾಖಲೆಗಳನ್ನು ಹಾಜರು ಪಡಿಸಿ ನಿಶಾನೆಗೊಳಿಸಿಕೊಂಡಿರುತ್ತೇನೆ.

ನಿಪಿ-1 ವಾದಿಯ ಜನನ ಪ್ರಮಾಣ ಪತ್ರ

ನಿಪಿ-2 ಅಂಗನವಾಡಿಯವರು ನೀಡಿರುವ ಪ್ರಮಾಣ ಪತ್ರ

ನಿಪಿ-3 ವಾದಿಯ ವ್ಯಾಸಾಂಗ ಪ್ರಮಾಣ ಪತ್ರ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಎರಡನೇ ಪ್ರತಿವಾದಿ ಪರ ವಕಿಲರಿಂದಃ**

ವಾದಿಯ ಜನನ ದಿಃ 24-07-2018ರಂದು ಗೋಕಾಕಿನ ಮಾಸುರಕರ ಆಸ್ಪತ್ರೆಯಲ್ಲಿ ಆಗಿರುತ್ತದೆ. ವಾದಿಗೆ ಪ್ರಥಮ ಎಂದು ನಾಮಕರಣ ಮಾಡಿರುತ್ತೇವೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಶ್ರೇಯಶ ಎಂದು ನಾಮಕಾರಣ ಮಾಡಿದ್ದು ಪ್ರತಿವಾದಿ ನಂ.2ರವರು ತಪ್ಪಾಗಿ ನಮೂದಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಃ24-08-2018ರಂದು ನಾನು ವಾದಿಯ ಜನನ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ ಎಂದರೆ ಸರಿ. ನಿಪಿ-1ನ್ನು ಪಡೆದಾಗಿನಿಂದ ದಾವೆ ಸಲ್ಲಿಸಿಸುವ ವರೆಗೆ, ನಿಪಿ-1ರಲ್ಲಿ ವಾದಿಯ ಹೆಸರನ್ನು ತಿದ್ದುಪಡಿ ಮಾಡಲು 2ನೇ ಪ್ರತಿವಾದಿಗೆ ನಾನು ಅರ್ಜಿ ಸಲ್ಲಿಸಿರುವುದಿಲ್ಲ. ವಾದಿಗೆ ಶಾಲೆಗೆ

ಪ್ರವೇಶ ಪಡೆಯುವಾಗ ಶ್ರೇಯಶ ಎಂದು ಬರೆಸಿರುತ್ತೇವೆ ಎಂದರೆ ಸರಿ. ವಾದಿಗೆ ಪ್ರಥಮ ಎಂದು ನಾಮಕರಣ ಮಾಡಿ, ಈಗ ಶ್ರೇಯಶ ಎಂದು ಬದಲಾಯಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–1ರಲ್ಲಿ ವಾದಿಯ ಹೆಸರು ಸರಿಯಾಗಿ ನಮೂದಿದ್ದರು ಸಹ, ತಪ್ಪಾಗಿ ನಮೂದು ಆಗಿರುತ್ತದೆ ಸುಳ್ಳು ನುಡಿಯುತ್ತಿದೆನೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯ ತಪ್ಪಿಲ್ಲದಿದ್ದರೂ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ .

**ಮರು ವಿಚಾರಣೆ : ಇಲ್ಲ.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.&ನ್ಯಾದಂ., ಗೋಕಾಕ.